ಓ.ಎಸ್ 43/2016 ಪಿ.ಡಬ್ಲೂ-1

ಸಾಕ್ಷಿಯನ್ನು ದಿನಾಂಕ 03-12-2021 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ ಬಿ ಎಚ ವಕೀಲರಿಂದ 5 ರಿಂದ 7, 9 ರಿಂದ 21, 23, 25,27 ನೇ ಪ್ರತಿವಾದಿಯರ ಪರವಾಗಿಃ-**

13. ವಾದಿ ಮತ್ತು ಪ್ರತಿವಾದಿಯರ ಮೂಲ ಪುರುಷ ವೀರಭದ್ರಪ್ಪ ಹೊಸೂರ. ಪರಪ್ಪ ನನ್ನ ಮುತ್ತಜ್ಜನಾಗಬೇಕು. ಸೋಮಪ್ಪನಿಗೆ ಎಷ್ಟು ಜನ ಮಕ್ಕಳಿದ್ದರು ನನಗೆ ಗೊತ್ತಿಲ್ಲ. ಆತ ಯಾವಾಗ ಮರಣ ಹೊಂದಿದ ನನಗೆ ನೆನಪಿಲ್ಲ. ಆತನ ಹೆಂಡತಿಯ ಹೆಸರು ನನಗೆ ನೆನಪಿಲ್ಲ. ವೀರಭದ್ರಪ್ಪನಿಗೆ ಸೋಮಪ್ಪ ಮಗನಾಗಬೇಕು. ಪರಪ್ಪ ಸೋಮಪ್ಪನ ಮಗ ಅಲ್ಲ. ಗದಿಗೆಪ್ಪ ಎನ್ನುವವರು ಸೋಮಪ್ಪನಿಗೆ ಮೊಮ್ಮಗನಾಗುತ್ತಿದ್ದರು. ನನ್ನ ಮುತ್ತಜ್ಜ ಪರಪ್ಪನ ಹೆಂಡತಿಯ ಹೆಸರು ನನಗೆ ನೆನಪಿಲ್ಲ. ಗದಿಗೆಪ್ಪನಿಗೆ ಮದುವೆ ಆಗಿತ್ತು. ಅವನ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಆತನಿಗೆ ಮಕ್ಕಳಾಗಿರಲಿಲ್ಲ. ಬಸವಣ್ಣೆಪ್ಪ ಸೋಮಪ್ಪನಿಗೆ ಏನಾಗಬೇಕೆಂದು ನನಗೆ ಗೊತ್ತಿಲ್ಲ. ಪರಪ್ಪ ಯಾವಾಗ ಮರಣ ಹೊಂದಿದರು ನನಗೆ ಗೊತ್ತಿಲ್ಲ. 1952 ರಲ್ಲಿ ಪರಪ್ಪ ದಾವೆ ಮಾಡಿದ್ದರು. ಆ ದಾವೆ ನಂ.24/1952 ಇದೆ. ಆ ದಾವೆಯನ್ನು ಪಾಲು ಕೇಳಿ ವೀರಭದ್ರಪ್ಪನ ವಂಶಸ್ಥರ ಮೇಲೆ ಮಾಡಿದ್ದರು. ಆ ದಾವೆಯಲ್ಲಿ ಕೊಟಗೊಂಡಹುಣಸಿ ಗಾಮದ ಸರ್ವೆ ನಂ. 145/1 ಎ ಮತ್ತು 188/2 ಎ ಮತ್ತು ಗಬ್ಬೂರ ಗ್ರಾಮದ 229/1 ಎ ಮತ್ತು ಸಿಟಿಎಸ ನಂಬರ 2220, 2099 ಮತ್ತು 2254 ಇದ್ದವು. ಬಸಪ್ಪ ಪರಪ್ಪ ಹೊಸೂರ ನನಗೆ ಅಜ್ಜನಾಗಬೇಕು. ಆ ಬಸಪ್ಪನಿಗೆ ನಮ್ಮ ತಂದೆ ಮಲ್ಲಿಕಾರ್ಜುನ ಮಗನಾಗಬೇಕು. ಆತನಿಗೆ ಪಾರವ್ವ, ಶಾಂತವ್ವ ಮತ್ತು ಬಸವ್ವ ಹೆಣ್ಣು ಮಕ್ಕಳಿದ್ದಾರೆ. ಅವರೆಲ್ಲರೂ ಈ ದಾವೆಯಲ್ಲಿ ಪ್ರತಿವಾದಿಗಳಾಗಿದ್ದಾರೆ. ಆ ದಾವೆ ನಂ.24/1952 ನಡೆದು ಪರಪ್ಪನಿಗೆ ಮತ್ತು ವೀರಭದ್ರಪ್ಪನಿಗೆ ಹಿಸ್ಸೆಗಳಾದ್ದವು. ಅದು 1952 ರಲ್ಲಿ ಹಿಸ್ಸೆ ಆಗಿತ್ತು. ಆ ದಾವೆ 1953 ರಲ್ಲಿ ರಾಜಿ ಡಿಕ್ರಿಯಾಯಿತು ಅಂದರೆ ಸರಿಯಲ್ಲ. ಆ ಡಿಕ್ರಿಯಾದ ನಂತರ ಕಬ್ಜಾ ಸಲುವಾಗಿ ಕೇಸ ಹಾಕಲಾಗಿತ್ತು. ನನಗೆ ಈರಪ್ಪ ರಾಯನಾಳ ಎನ್ನುವವರು ಗೊತ್ತಿಲ್ಲ. ಆ ದಾವೆಯಲ್ಲಿ ನಮ್ಮ ತಂದೆ ಮತ್ತು ಆತನ ಸಹೋದರಿಯರು ತಕರಾರು ಹಾಕಿರಲಿಲ್ಲ. ಅದೇ ರೀತಿ ಅವರ ಪರವಾಗಿ ಯಾರೂ ವಕೀಲರು ಹಾಜರಾಗಿರಲಿಲ್ಲ. **ಈಗ ನನಗೆ ತೋರಿಸಲಾದ ದಾಖಲೆ ನೋಡುತ್ತಿದ್ದು ಅದರ ಮೇಲೆ ನಮ್ಮ ತಂದೆಯ ಸಹಿ ಇದೆ ಅದರೆ ಅದನ್ನು ಸುಳ್ಳು ಸಹಿ ಮಾಡಿರುತ್ತಾರೆ. ಈಗ**

**ಆ ದಾಖಲೆಯನ್ನು ಸಾಕ್ಷಿಯು ಗುರುತಿಸಿದ ಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು.** ಈಗ ನನಗೆ ತೋರಿಸಲಾದ ನಮ್ಮ ತಂದೆ ಪ್ರತಿವಾದಿ 28 ಇವರಿಗೆ ಕಳುಹಿಸಲಾದ ನ್ಯಾಯಾಲಯದ ಸಮನ್ಸ ಮೇಲೆ ನಮ್ಮ ತಂದೆಯ ಸಹಿ ಇದೆ ಅಂದರೆ ಸಾಕ್ಷಿಯು ಇದೆ ಆದರೆ ಅದು ಸುಳ್ಳು ಸಹಿ ಮಾಡಿದ್ದಾರೆಂದು ಹೇಳುತ್ತಾರೆ. **ಆ ಸಮನ್ಸನ್ನು ನಿಡಿ-2 ಎಂದು ಗುರುತಿಸಲಾಯಿತು.** ಈಗ ಅದರ ಮೇಲಿರುವ ಸಹಿ ನೋಡುತ್ತಿದ್ದು ಅದು ನಮ್ಮ ತಂದೆಯ ಸಹಿ ಆಗಿರುವುದಿಲ್ಲ. ನಾನು ಈರಪ್ಪ ರಾಯನಾಳ ಇವರ ಹೆಸರು ಕೇಳಿದ್ದೇನೆ. ನನ್ನ ಅಜ್ಜ ಬಸಪ್ಪ ಇತನು ತನ್ನ ಪಾಲಿಗೆ ಬಂದ ಜಮೀನುಗಳನ್ನು ಮತ್ತು ಮನೆಗಳನ್ನು ಸದರಿ ಈರಪ್ಪ ರಾಯನಾಳ ಇತನಿಗೆ ಕೆಲವೊಂದು ಖರೀದಿ ಪತ್ರದ ಮುಖಾಂತರ ಮಾರಾಟ ಮಾಡಿದ್ದಾರೆ ಮತ್ತು ಕೆಲವೊಂದು ಆಸ್ತಿಗಳನ್ನು ದಾನಪತ್ರ ಮಾಡಿಸಿಕೊಂಡಿದ್ದರು ಅಂತಾ ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ನ ಮ್ಮ ಅಜ್ಜ ಬಸಪ್ಪ ಜೆ ಎಸ ನಂ.224/1954 ಅರ್ಜಿ ಸಲ್ಲಿಸಿ ನೊಂದಾಯಿತ ಖರೀದಿ ಪತ್ರ ಮತ್ತು ಭಕ್ಷೀಸ ಪತ್ರವನ್ನು ರದ್ದುಪಡಿಸಿಕೊಂಡಿದ್ದರು ಅಂದರೆ ಸರಿಯಲ್ಲ. ಆ ಆದೇಶದ ಮೇಲೆ ರಾಯನಾಳ ಮತ್ತು ಇತರರು ಸಿವಿಲ್ ಅಪೀಲ ನಂ.317/1957 ನೇದ್ದನ್ನು ಜಿಲ್ಲಾ ನಾಯಾಲಯದಲ್ಲಿ ಪ್ರಶ್ನಿಸಿ ಆದೇಶ ಪಡೆದಿದ್ದರು ಅಂದರೆ ನನಗೆ ಗೊತ್ತಿಲ್ಲ, ಆ ಆದೇಶದ ಮೇಲೆ ನಮ್ಮ ಅಜ್ಜ ಮಾನ್ಯ ಉಚ್ಛನ್ಯಾಯಾಲಯದಲ್ಲಿ ಆರ್ ಎಸ್ ಎ ನಂ.495/1996 ಮಾಡಿದ್ದರು ಮತ್ತು ಅದು ಪುರಸ್ಕರಿಸಲಾಯಿತು ಅಂದರೆ ಸರಿಯಲ್ಲ.

14. ಅದು ಮುಗಿದ ನಂತರ ಬಸಪ್ಪ ಈತ ಓ ಎಸ ನಂ.1/1968 ದಾವೆಯನ್ನು ಹಿಸ್ಸೆಗಾಗಿ ಮಾಡಿದ್ದ ಅಂದರೆ ಸರಿಯಲ್ಲ. ಅದು ವಜಾಯಾಯಿತು ಅಂದರೆ ಸರಿಯಲ್ಲ. ಅದರ ಮೇಲೆ ನಮ್ಮ ಅಜ್ಜ ಆರ್ ಎಫ ಎ ನಂ.41/1978 ಮಾಡಿದ್ದ ಅದು ವಜಾಯಾಯಿತು ಅಂದರೆ ಸರಿಯಲ್ಲ. ಆನಂತರ ನಮ್ಮ ಅಜ್ಜ ಇ ಪಿ ನಂ. 237/1979 ಅರ್ಜಿ ಹಾಕಿದ್ದರು ಅದು ತದನಂತರ ಇ ಪಿ ನಂ.166/1989 ಆಗಿತ್ತು ಅಂದರೆ ಸರಿ. ಅದರಲ್ಲಿ ನಮ್ಮ ತಂದೆ 14 ಲಕ್ಷ ಪಡೆದು ತನ್ನ ಹಿಸ್ಸೆ ಬಿಡುಕೊಟ್ಟಿದ್ದಾನೆಂದರೆ ಸರಿಯಲ್ಲ. ಆ ಕಾರಣ ಆ ಡಿಕ್ರಿ ಸಂಪೂರ್ಣವಾಗಿ ಅಂಗೀಕರಿಸಲ್ಪಟ್ಟಿತ್ತು ಅಂದರೆ ಸರಿಯಲ್ಲ. ಆ ಕಾರಣ ನಾನು ಮಾಡಿದ ದಾವೆ 3ನೇ ದಾವೆಯಾಗಿದೆ ಅದು ನ್ಯಾಯಾಲಯದಲ್ಲಿ ನಿಲ್ಲುವುದಿಲ್ಲ ಅಂದರೆ ಸರಿಯಲ್ಲ. ಈಗ ಆ ಇ ಪಿ ಯಲ್ಲಿ ಹಣ ಪಡೆದ ಬಗ್ಗೆ ನಮ್ಮ ತಂದೆ ಸಹಿ ಮಾಡಿದ ಪಾವತಿಯನ್ನು ನೋಡುತ್ತಿದ್ದು ಅದರ ಮೇಲೆ ನಮ್ಮ ತಂದೆಯ ಸಹಿ ಇದೆ ಅಂದರೆ

ಸಾಕ್ಷಿಯು ಅದು ಸುಳ್ಳು ಸಹಿ ಮಾಡಿದ್ದಾರೆಂದು ಹೇಳುತ್ತಾರೆ. ರಾಜಿ ಡಿಕ್ರಿಯಾದ ನಂತರ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿ ಉಳಿದಿಲ್ಲ ಅಂದರೆ ಸರಿಯಲ್ಲ.

15. ನಾನು ಸಣ್ಣವನಿದ್ದಾಗ ನಮ್ಮ ಮನೆತನದ ವ್ಯವಹಾರವನ್ನು ನಮ್ಮ ತಂದೆ ಮಾಡುತ್ತಿದದರು ಅಂದರೆಸಾಕ್ಷಿಯು ಅವರು ಮಾಡುತ್ತಿದ್ದರು ಮತ್ತು ನಮ್ಮ ತಾಯಿಯು ಸಹ ಮಾಡುತ್ತಿದ್ದರು. ಈಗ ನಮ್ಮ ತಂದೆ ಏನೂ ಕೆಲಸ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಈಗ ಅವರು ಎಲ್ಲಿ ಇದ್ದಾರೆಂದು ನನಗೆ ಗೊತ್ತಿಲ್ಲ. ಸುಮಾರು 20 ವರ್ಷಗಳಿಂದ ಅವರು ಎಲ್ಲಿದ್ದಾರೆಂದು ನನಗೆ ಗೊತ್ತಿಲ್ಲ. ನಾವು ಈ ದಾವೆಯಲ್ಲಿ ನಮ್ಮ ತಂದೆಯ ವಿಳಾಸ ತೋರಿಸಿದ್ದೇವೆ ಮತ್ತು ವಿಳಾಸಕ್ಕೆ ಸಮನ್ಸ ಜಾರಿಯಾಗಿದೆ ಅಂದರೆ ಸರಿಯಲ್ಲ. 1979 ರ ವರಿಗೆ ನಾವು ಕಬ್ಜಾ ಪಡೆಯಲು ಇ ಪಿ ಹಾಕಿರಲಿಲ್ಲ ಅಂದರೆ ಸರಿಯಲ್ಲ. ನನಗೆ ಈ ಕೇಸಿನಲ್ಲಿ ಏನೂ ಮಾಹಿತಿ ಇಲ್ಲ ಮತ್ತು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ದಾವೆಯಲ್ಲಿ ಬರೆದಂತೆ ಸಾಕ್ಷಿ ನುಡಿಯದೇ ತದ್ವಿರುದ್ಧವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಒಂದನೇ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ.